ಜಾಗವನ್ನು ತೋರಿಸಿ ರಸ್ತೆ ಮಾಡಿಕೊಡುವುದಕ್ಕೆ ಹೇಳಿದ್ದೇವೆ. ಆದ್ದರಿಂದ ಇದನ್ನು ತಾವು ಕನ್ಸಿಡರ್ ಮಾಡುತ್ತೀರಾ?

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಆ ವಿಷಯ ಏನೆಂಬುದನ್ನು ನಾನು ಕರೆಕ್ಟ್ ಆಗಿ ನೋಡಿ ಹೇಳುತ್ತೇನೆ.

ಒಪ್ಪಂದಗಳನ್ನು ಮರು ಪರಿಶೀಲಿಸುವುದು

158 (1257) ಶ್ರೀ ಡಿ.ಆರ್. ಪಾಟೀಲ್ (ಗದಗ್) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಏಪ್ರಿಲ್ 2006ರಿಂದ ಜನವರಿ 2007ರ ಅವಧಿಯಲ್ಲಿ ಎಂ.ಎಂ.ಟಿ.ಸಿ. ನಿಗದಿಪಡಿಸಿದ ಕಬ್ಬಿಣದ ಲಂಪ್ಸ್ ಮತ್ತು ಫೈನ್ಸ್‌ಗಳ ಬೇರೆ ಬೇರೆ ಗುಣಮಟ್ಟದ ಅದಿರಿನ ಬೆಲೆ ಏನು (ತಿಂಗಳವಾರು, ಪ್ರತಿ ವಾರದ ವಿವರ ನೀಡುವುದು);

ಆ) ಸರ್ಕಾರಿ ಸ್ವಾಮ್ಯದ ಎಂ.ಎಂ.ಎಲ್. ಸಂಸ್ಥೆ ಈ ಅವಧಿಯಲ್ಲಿ ಯಾವ ಯಾವ ಗುಣಮಟ್ಟದ ಅದಿರನ್ನು ತಾನಾಗಲೀ ಇಲ್ಲವೇ ಬೇರೆ ಯಾವುದಾದರೂ ಸಂಸ್ಥೆ ಅಥವಾ ವ್ಯಕ್ತಿಯಿಂದಾಗಲೀ ಗುತ್ತಿಗೆ ಆಧಾರದ ಮೇಲೆ ತೆಗೆಯಿಸಿ ಮಾರಾಟ ಮಾಡಿದ ಮೇಲ್ಕಂಡ ಅದಿರಿನ ಬೆಲೆ ಹಾಗೂ ಪ್ರಮಾಣ ಎಷ್ಟು (ತಿಂಗಳುವಾರು, ಪ್ರತಿ ವಾರದ, ಸಂಸ್ಥೆ ಹಾಗೂ ವ್ಯಕ್ತಿವಾರು ವಿವರ ನೀಡುವುದು);

ಇ) ಇದು ಎಂ.ಎಂ.ಟಿ.ಸಿ. ನಿಗದಿಪಡಿಸಿದ ಬೆಲೆಗಿಂತ ಕಡಿಮೆ ಇದೆಯೇ ಅಥವಾ ಹೆಚ್ಚಿದೆಯೇ;

ಈ) ಕಡಿಮೆ ಇದ್ದಲ್ಲಿ ಆ ದರದಲ್ಲಿ ಮಾರಾಟ ಮಾಡಲು ಕಾರಣಗಳೇನು; (ಒಪ್ಪಂದವಿದ್ದಲ್ಲಿ ಅದರ ಪ್ರತಿ ನೀಡುವುದು);

ಉ) ಈ ಅವಧಿಯಲ್ಲಿ ಎಂ.ಎಂ.ಎಲ್. ಯಾವುದಾದರೂ ಒಪ್ಪಂದವನ್ನು ಮರು ಪರಿಶೀಲಿಸಿ ಹೆಚ್ಚಿನ ಬೆಲೆ ನಿಗದಿಪಡಿಸಿದೆಯೇ; ನಿಗದಿಪಡಿಸಿದ್ದಲ್ಲಿ ಅದಕ್ಕೆ ಕಾರಣಗಳೇನು;

ಊ) ಇದರಿಂದ ಸಂಸ್ಥೆಗೆ ಆದ ಲಾಭ ಏನು;

ಋ) ಇದೇ ರೀತಿ ಕ್ರಮ ಕೈಗೊಳ್ಳಲು ಬೇರೆ ಬೇರೆ ಸಂಸ್ಥೆ ಹಾಗೂ ವ್ಯಕ್ತಿಗಳ ಜೊತೆ ಮಾಡಿದ ಒಪ್ಪಂದಗಳನ್ನು ಮರು ಪರಿಶೀಲಿಸಲು ಇರುವ ತೊಂದರೆಗಳೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು):

ಅ) ಕಬ್ಬಿಣದ ಲಂಪ್ಸ್ ಮತ್ತು ಫೈನ್ಸ್‌ಗೆ (Lumps and Iron ore fines) ಎಂ.ಎಂ.ಟಿ.ಸಿ. ದರಪಟ್ಟಿಯನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ಲಂಪಿ, ಕ್ಯಾಲಿಬ್ರೇಟೆಡ್ ಅದಿರು ಮತ್ತು ಫೈನ್ಸ್ ಅನ್ನು ಎಂ.ಎಂ.ಎಲ್. ಸಂಸ್ಥೆಯಿಂದ ಪಡೆದ ಸಂಸ್ಥೆಗಳು ಖರೀದಿದಾರರ ಹೆಸರುಗಳನ್ನು ಹಾಗೂ ಮಾರಾಟದ ಬೆಲೆಯನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಇ) ರೈಸ್ ಕಂ ಸೇಲ್ ಒಪ್ಪಂದ ಟೆಂಡರ್ ಹಾಗೂ ನ್ಯಾಯಾಲಯದ ಆಚೆ (Out of Court settlement) ತೀರ್ಮಾನಿಸಲಾದ ಪ್ರಕರಣಗಳನ್ನು ಹೊರತುಪಡಿಸಿ, ಎಂ.ಎಂ.ಎಲ್. ಸಂಸ್ಥೆಯು ಫೈನ್ಸ್ ಹಾಗೂ ಕಬ್ಬಿಣದ ಅದಿರನ್ನು ಪ್ರಸ್ತುತದಲ್ಲಿರುವ ಎಂ.ಎಂ.ಟಿ.ಸಿ. ದರದಲ್ಲಿ ರೂ. 98/– ಪ್ರತಿ ಮೆಟ್ರಿಕ್ ಟನ್‌ಗೆ ಕಡಿತ ಮಾಡಿ (ಸಾಗಾಣಿಕೆ ವೆಚ್ಚವಾಗಿ) ಎಕ್ಸ್–ಮೈನ್ಸ್ ಆಧಾರದಲ್ಲಿ ಮಾರಾಟ ಮಾಡುತ್ತಿದೆ. ಎಂ.ಎಂ.ಟಿ.ಸಿ. ದರವು F.O.R. (Free on Rail) ಮೂಲದ್ದಾಗಿದ್ದು, ಇದರಲ್ಲಿ ರಾಯಲ್ಟಿ, ಸೆಸ್, ವೇ ಪರ್ಮಿಟ್ ಚಾರ್ಜು, ಲೋಡಿಂಗ್, ಅನ್‌ಲೋಡಿಂಗ್ ಮತ್ತು ಗಣಿ ಪ್ರದೇಶದಿಂದ ಬನಹಟ್ಟಿ ರೈಲ್ವೇ ಯಾರ್ಡ್, ಸಂಡೂರು ತಾಲ್ಲೂಕುವರೆಗೆ ಸಾಗಿಸುವ ಸಾಗಾಣಿಕೆಯ ವೆಚ್ಚವೂ ಸೇರಿರುತ್ತದೆ.

ಎಂ.ಎಂ.ಟಿ.ಸಿ.ಯ ಪ್ರತಿ ಟನ್ನಿನ ದರದಲ್ಲಿ ರೂ. 98/– ಕಡಿತಗೊಳಿಸಿದ ಬೆಲೆಯು ಎಂ.ಎಂ.ಎಲ್. ಸಂಸ್ಥೆಯ ಎಕ್ಸ್ ಮನ್ ದರವಾಗಿದೆ. (ಇದರಲ್ಲಿ ರಾಯಲ್ಟಿ, ಸೆಸ್, ವೇಪರ್ಮಿಟ್ ಚಾರ್ಜು, ಲೋಡಿಂಗ್, ಅನ್‌ಲೋಡಿಂಗ್ ಸಾಗಾಣಿಕೆ ವೆಚ್ಚವು ಸೇರಿರುವುದಿಲ್ಲ). ಹಿಂಬದಿ ಲೆಕ್ಕಾಚಾರದಂತೆ (On working backwards) ಎಕ್ಸ್ ಮೈನ್ ಆಧಾರಿತ ಹಾಗೂ ಸಾಗಾಣಿಕೆ ವೆಚ್ಚಗಳನ್ನು ಪರಿಗಣಿಸಿದಲ್ಲಿ, ಎಂ.ಎಂ.ಎಲ್. ಸಂಸ್ಥೆಯ ದರವು ಎಂ.ಎಂ.ಟಿ.ಸಿ. ನಿಗದಿಪಡಿಸಿರುವ ದರಕ್ಕಿಂತ ಪ್ರತಿ ಟನ್ನಿಗೆ ಸುಮಾರು 100.00 ರೂ.ಗಳಷ್ಟು ಹೆಚ್ಚಾಗಿರುತ್ತದೆ.

ಮುಂದುವರೆದು, ಎಂ.ಎಂ.ಟಿ.ಸಿ. ಸಂಸ್ಥೆಯು ಖರೀದಿ ಮಾಡುವ ದರವು ಶುಲ್ಕ ತೂಕದ (Dry/weight) ಆಧಾರಿತವಾಗಿದ್ದು, ಆರ್ದ್ರತೆಯ (Moisture content) ತೂಕವನ್ನು ಕಳೆಯಲಾಗುತ್ತದೆ. ಎಂ.ಎಂ.ಎಲ್. ಸಂಸ್ಥೆಯು ಅದಿರನ್ನು as is where is basis ರೂಪದಲ್ಲಿ ಮಾರಾಟ ಮಾಡುತ್ತಿದೆ.

ಈ) ರೈಸ್ ಕಂ ಸೇಲ್ ಅಗ್ರಿಮೆಂಟ್‌ಗೆ ಸಂಬಂಧಿಸಿದಂತೆ ಟೆಂಡರ್ ಮೂಲಕ ನಿಗದಿಪಡಿಸಿರುವ ಮಾರಾಟ ದರವು ಪ್ರಸ್ತುತ ಎಂ.ಎಂ.ಟಿ.ಸಿ. ದರಕ್ಕಿಂತ ಕಡಿಮೆ ಇರುತ್ತದೆ. ಎಂ.ಎಂ.ಎಲ್. ಸಂಸ್ಥೆಯು ಇನ್‌ಪುಟ್ ಕಾಸ್ಟ್ ಆಧಾರದ ಮೇಲೆ ರೈಸಿಂಗ್ ವೆಚ್ಚವನ್ನು (Raising cost) ನಿಗದಿಪಡಿಸುತ್ತದೆ. ಎಂ.ಎಂ.ಎಲ್. ಸಂಸ್ಥೆಯು ಮಾರುಕಟ್ಟೆ ಒಪ್ಪಂದವನ್ನು ಟೆಂಡರ್ ಪ್ರಕ್ರಿಯೆ ಮುಖಾಂತರ ಹೆಚ್ಚಿನ ದರ ನಮೂದಿಸಿದ ಸಂಸ್ಥೆಗೆ ನೀಡಲಾಗುವುದು. ಸದರಿ ಮಾರುಕಟ್ಟೆ ಒಪ್ಪಂದವನ್ನು ಪಡೆದ ಸಂಸ್ಥೆಯು ಸೂಚಿಸಿದ ಸಂಸ್ಥೆಗೆ ರೈಸಿಂಗ್ ಕಾಂಟ್ರ್ಯಾಕ್ಟ್ ಅನ್ನು ಎಂ.ಎಂ.ಎಲ್. ಸಂಸ್ಥೆಯು ನಿಗದಿಪಡಿಸಿದ ರೈಸಿಂಗ್ ವೆಚ್ಚಕ್ಕೆ ನೀಡಲಾಗುವುದು. ಇಂತಹ ರೈಸಿಂಗ್ ಕಾಂಟ್ರ್ಯಾಕ್ಟರ್‌ಗಳು ಯಂತ್ರೋಪಕರಣಗಳ ಮೇಲೆ ಬಂಡವಾಳ ಹೂಡುವುದಲ್ಲದೆ, ಅವರದೇ ಆದ ಸಿಬ್ಬಂದಿಯನ್ನು ಗಣಿಗಾರಿಕೆಗೆ ಉಪಯೋಗಿಸುವರು.

ಎಂ.ಎಂ.ಎಲ್. ಸಂಸ್ಥೆಯು ರೈಸಿಂಗ್ ಮತ್ತು ಮಾರ್ಕೆಟಿಂಗ್ ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದದನ್ವಯ ಕ್ಯಾಲಿಬ್ರೇಟೆಡ್/ಫೈನ್ಸ್ ಅದಿರನ್ನು ಒಪ್ಪಂದದಲ್ಲಿ ನಿರ್ಣಯಿಸಿದ ದರದಲ್ಲಿ ಪೂರೈಕೆ ಮಾಡಲು ಬದ್ಧವಾಗಿರುತ್ತದೆ. ಒಪ್ಪಂದದ ಪ್ರಾಥಮಿಕ ಅವಧಿ ಮುಗಿದ ನಂತರ (Initial block-in period) ಈ ದರಗಳನ್ನು ಆಗಿಂದಾಗ್ಗೆ ಪರಿಷ್ಕರಿಸಲಾಗುವುದು.

ಎಂಎಂಎಲ್ ಸಂಸ್ಥೆಯು 7 ಸಾಮೂಹಿಕ ಕಂಪನಿಗಳ ಜೊತೆಗೆ ಮಾಡಿಕೊಂಡ Out of Court settlement ನಂತೆ 1.75 ಲಕ್ಷ ಮೆಟ್ರಿಕ್ ಟನ್ ಅಧಿಕ ಪ್ರಮಾಣದ ಅದಿರನ್ನು ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಯಾದ ಪ್ರತಿ ಟನ್ನಿಗೆ ರೂ. 577.00ರಂತೆ ನೀಡುವ ಬಗ್ಗೆ ಸಂಸ್ಥೆಯು ಹಿಂದಿನ ಒಪ್ಪಂದದ ಪತ್ರದ ಮೇಲೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿ ರಿವಿಷನ್ ಅರ್ಜಿಯನ್ನು ಸಲ್ಲಿಸಲಾಗಿದೆ. ಈ ರಿವಿಷನ್ ಅರ್ಜಿಯು ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

ಜೂನ್ 2005ರ ಟೆಂಡರ್ ಪ್ರಕ್ರಿಯೆಯಲ್ಲಿ ಮೆ: ಸ್ಟೇಟ್ ಟ್ರೇಡಿಂಗ್ ಕಾರ್ಪೋರೇಷನ್ (ಮೆ: ಎಸ್.ಟಿ.ಸಿ.) ಸಂಸ್ಥೆಯು ಐರನ್ ಓರ್ ಫೈನ್ಸ್ ಕೊಳ್ಳಲು ಅತಿ ಹೆಚ್ಚಿನ ಬೆಲೆಯಲ್ಲಿ ನೀಡಿರುವರು. ಈಗ, ಎಂ.ಎಂ.ಎಲ್. ಸಂಸ್ಥೆಯು ಹಾಲಿ ಎಂ.ಎಂ.ಟಿ.ಸಿ. ದರದಲ್ಲಿ (ಪ್ರತಿ ಟನ್‌ಗೆ ರೂ. 1,070/–) ಐರನ್ ಓರ್ ಫೈನ್ಸ್ ಅನ್ನು ಖರೀದಿ ಮಾಡಲು, ಮೆ: ಎಸ್.ಟಿ.ಸಿ. ಸಂಸ್ಥೆಗೆ

ಪ್ರೇರೇಪಿಸಲಾಗಿ, ಅದರಂತೆ, 40,000 ಮೆಟ್ರಿಕ್ ಟನ್ ಐರನ್ ಓರ್ ಫೈನ್ಸ್ ಅನ್ನು ಪ್ರಸ್ತುತ ಎಂ.ಎಂ.ಟಿ.ಸಿ. ದರದಲ್ಲಿ ಮೆ: ಎಸ್.ಟಿ.ಸಿ. ಸಂಸ್ಥೆಗೆ ಮಾರಾಟ ಮಾಡಲಾಗಿದೆ. ಈ ಮಾರಾಟದಿಂದ, ಎಂ.ಎಂ.ಎಲ್. ಸಂಸ್ಥೆಗೆ ರೂ. 158.00 ಲಕ್ಷಗಳ ಅಧಿಕ ಹಣ ಸಂದಾಯವಾಗಿರುತ್ತದೆ.

ಊ) ಹಿಂದೆ ಮಾಡಿಕೊಳ್ಳಲಾದ ರೈಸ್ ಕಂ ಸೇಲ್ ಕಾಂಟ್ರ್ಯಾಕ್ಟ್ ಒಪ್ಪಂದಗಳು, ಮಾರಾಟ ಒಪ್ಪಂದಗಳು, ಖರೀದಿದಾರರಿಗೆ ಪ್ರಸ್ತುತ ಜಾರಿಯಲ್ಲಿದ್ದ ಮಾರುಕಟ್ಟೆ ದರಕ್ಕಿಂತ ಕಡಿಮೆ ದರದಲ್ಲಿ ಖನಿಜ ಪೂರೈಕೆ ಮಾಡಲು ಮಾಡಿಕೊಳ್ಳಲಾದ ಹಿಂದಿನ ಬದ್ಧತೆ (earlier commitments) ಎಂ.ಎಂ.ಎಲ್. ಸಂಸ್ಥೆಗೆ ಹಾನಿಕಾರಕವಾಗುವಂತಹ ಸನ್ನಿವೇಶಗಳ ಬಗ್ಗೆ ಪುನರ್ವಿಮರ್ಶಿಸಲಾದ ವಿವರಗಳನ್ನು ಅನುಬಂಧ–3ರಲ್ಲಿ ನೀಡಲಾಗಿದೆ.

ಋ) ಸಂಸ್ಥೆಯ ಆರ್.ಸಿ.ಎಸ್., ಜಂಟಿ ಸ್ವಾಮ್ಯ, ಮಾರಾಟ ಒಪ್ಪಂದ ಹಾಗೂ ಖರೀದಿದಾರರೊಂದಿಗೆ ಸಮಾಲೋಚನೆ ಹಾಗೂ ಶ್ರಮದಿಂದಾಗಿ ಅಧಿಕ ಆದಾಯವು ಸಂಸ್ಥೆಗೆ ಬಂದಿರುತ್ತದೆ.

ಋ) ಎಂ.ಎಂ.ಎಲ್. ಸಂಸ್ಥೆಯ ಹಿತಾಸಕ್ತಿಗೆ ಧಕ್ಕೆಯಾಗಿರುವ ಒಪ್ಪಂದಗಳ ಬಗ್ಗೆ ಮರು ಪರಿಶೀಲಿಸಲಾಗುತ್ತಿದೆ. ಸಂಸ್ಥೆಗೆ ಆಗುವ ತಾರತಮ್ಯ ಮತ್ತು ಅನ್ಯಾಯಗಳನ್ನು ಸರಿಪಡಿಸಲು ಕ್ರಮಕೈಗೊಳ್ಳಲಾಗುತ್ತಿದೆ.

Mysore Minerals Limited

Subbarayanahalli Iron Ore Mines

Annexure-1

Statement showing price of Iron Ore (Lumps, Calibrated Ore and Fines) fixed by MMTC time to time

Price Date	BG Lumps 64%	HG Lumps 67%	BG CAL 64%	HG CAL 67%	HG Fines for 65%	Ex Plot 65-65%	Ex Plot 64-63%	Remarks
Price w.e.f. 3-3-2006	975.00	1075.00	1028.00	1178.00	1350.00			All inclusive
Price w.e.f. 22-4-2006	975.00	1075.00	1028.00	1178.00	1350.00			All inclusive
Price w.e.f. 11-5-2006	975.00	1075.00	1028.00	1178.00	1450.00			All inclusive
Price w.e.f. 18-5-2006	975.00	1075.00	1028.00	1178.00	1310.00			All inclusive

Price w.e.f. 18-5-2006	975.00	1075.00	1028.00	1178.00	1450.00	1400.00	1200.00	All inclusive
Price w.e.f. 21-6-2006	975.00	1075.00	1400.00	1178.00	1450.00	1400.00	1200.00	All inclusive
Price w.e.f. 22-4-2006	975.00	1075.00	1028.00	1178.00	1350.00			All inclusive
Price w.e.f. 11-5-2006	975.00	1075.00	1028.00	1178.00	1310.00	1260.00	1100.00	All inclusive
Price w.e.f. 18-5-2006	975.00	1075.00	1028.00	1178.00	1450.00	1400.00	1200.00	All inclusive
Price w.e.f. 8-9-2006	975.00	1075.00	1028.00	1178.00	1375.00	1325.00	1125.00	All inclusive
Price w.e.f. 7-11-2006	975.00	1075.00	1370.00	1178.00	1345.00	1295.00	1095.00	All inclusive

Price w.e.f. 22-11-2006	975.00	1075.00	1370.00	1178.00	1430.00	1380.00	1180.00	All inclusive

Note: 1. All inclusive Means:- It is inclusive of permit charges, Loading, Transport, Tax etc., i.e., all the expenditure involved in transporting material from Mine head to Railway Plot or free on rail (FOR) & Basic Price of material.

2. The prices of mentioned in the statement shown as & when MMTC prices are changed, the same rate is continued in between the dates.

Mysore Minerals Limited

1) Subbarayanahalli Iron Ore Mine (SIOM)

Annexure – 2

(a) Caliberated Ore – under Raise cum Sale Contract Rate Rs. 314/-pmt. less Royalty, Cess and way permit charges

Sl. No.	Name of the Buyer	Month	Quantity (MTS)	Grade	Basic Price (Rs.)	Amount (Rs.)	Remarks
1	Kalyani Steels	April-06	18660.145	C-Ore	283.53	5290711.00	Price is fixed

	Ltd.						as per the RCS agreement for the period from 1-4-05 to 31-3-2006 (M/s KSL is claiming the validity period upto 31-3-2007)
		May-06	21166.654		283.53	6001381.00	
		June-06	23227.979		283.53	6585829.00	
		July-06	29115.965		283.53	8255250.00	
		Aug-06	19198.169		284.13	5454776.00	
		Sep-06	20156.585		284.13	5727090.00	
		Oct-06	25021.364		284.13	7109320.00	
		Nov-06	24564.961		284.13	6979642.00	
		Dec-06	25711.695		284.13	7305464.00	
		Jan-07	17209.117		284.13	4889626.00	
	Total		**224032.634**			**63599089.00**	
2	Mukund Steels	April-06	27499.425	C-Ore	283.53	7796912.00	Price is fixed as per the RCS agreement for the period from
	Ltd	May-06	24527.656		283.53	6954326.00	
		June-06	30606.211		283.53	8677779.00	
		July-06	37998.465		283.53	10773705.00	

		Aug-06	37015.551		284.13	10517228.00	1-4-05 to 31-3-2006 (M/s Mukund Steels is claiming the validity period upto 31-3-2007)
		Sep-06	30645.235		284.13	8707231.00	
		Oct-06	33962.076		284.13	9649645.00	
		Nov-06	34800.734		284.13	9881933.00	
		Dec-06	34490.550		284.13	9799800.00	
		Jan-07	19302.013		284.13	5484281.00	
	Total		**310847.916**			**88242840.00**	
b)	Iron Ore Fines						
3	Kineta Minerals	Sep-06	39254.470	-65%	1076.90	42273139.00	MMTC Rate
	& Metals Limited	Oct-06	20077.540	-65%	1076.90	21621503.00	MMTC Rate
		Nov-06	2545.150	-65%	1076.90	2740872.00	MMTC Rate
		Dec-06	24123.340	-65%	1131.90	27305209.00	MMTC Rate
		Jan-07	4984.350	-65%	1131.90	5641786.00	MMTC Rate
	Total		**90984.850**			**99582509.00**	

4	Mysore Sales International						
		July-06	5754.250	-65%	1151.90	6628321.00	MMTC Rate
	Total		**5754.250**			**6628321.00**	
5	Pacific Enterprises	April-06	32.000	-65%	1080.60	34579.00	MMTC Rate
	Total		**32.000**			**34579.00**	
6	K. Mark	April-06	1701.000	-65%	1080.60	1838101.00	MMTC Rate
	Total		**1701.000**			**1838101.00**	
7	Karishma Exports	Nov-06	6594.420	-65%	1046.90	6903698.00	MMTC Rate
	Total		**6594.420**			**6903698.00**	
8	**State Trading Corporation**						
		April-06	5287.090	+65%	1230.60	6506293.00	MMTC Rate
			25823.230	-65%	1080.60	27904582.00	MMTC Rate
		June-06	36237.690	-65%	1125.00	40767401.00	Tender Rate
		July-06	3750.760	-65%	1125.00	4219605.00	Tender Rate

		Nov-06	15172.890	-65%	1046.00	15884499.00	MMTC Rate
			14284.250	-65%	1131.90	16168343.00	MMTC Rate
		Dec-06	11596-690	-65%	1131.90	13126180.00	MMTC Rate
	Total		**112152.500**			**124576903.00**	
9	Rajamahal Silks	Sep-06	3670.610	-65%	1151.90	4228176.00	MMTC Rate
			16618.550	-65%	1076.90	17896516.00	MMTC Rate
		Oct-06	4263.950	-65%	1076.90	4591848.00	MMTC Rate
		Jan-07	22984.180	-65%	1131.90	26015793.00	MMTC Rate
	Total		**47537.290**			**52732333.00**	
10	Orient Goa Pvt. Ltd.	April-06	13830.170	-65%	1200.00	16596204.00	MMTC Rate
		May-06	6162.820	-65%	1200.00	7395384.00	MMTC Rate
		June-06	3474.570	-65%	1251.90	4002357.00	MMTC Rate
		July-06	2766.600	-65%	1151.90	3186847.00	MMTC Rate
		Oct-06	6489.560	-65%	1076.90	6988607.00	MMTC Rate

		Nov-06	11347.890	-65%	1076.90	1222543.00	MMTC Rate
			7552.380	-65%	1046.90	7906587.00	MMTC Rate
			1517.370	-65%	1131.90	1717511.00	MMTC Rate
		Dec-06	34713.750	-65%	1131.90	32992494.00	MMTC Rate
		Jan-07	14016.110	-65%	1131.90	15864835.00	MMTC Rate
	Total		**101871.220**			**97873369.00**	
11	V.S. Dempo	April-06	19819.830	-65%	1080.60	21417308.00	MMTC Rate
		May-06	11444.620	-65%	1130.60	12939287.00	MMTC Rate
	Total		31264.450			34356595.00	
12	Skanda Exports	April-06	3929.360	-65%	555.70	2183543.00	As per Court settlement which has been contested and no fresh supplies made at earlier rates

							inspite of contempt proceedings.
	Total		**3929.360**			**2183543.00**	
13	S. Pradeep Exports	May-06 June-06 July-06	10133.400 9852.790 143.600	-65% -65% -65%	555.70 555.70 555.70	5631130.00 5475195.00 79799.00	As per Court settlement which has been contested and no fresh supplies made at earlier rates inspite of contempt proceedings.
	Total		**20129.790**			**11186124.00**	

14	Balabanu Enterprises Pvt. Ltd	June-06 July-06	4911.230 83.840	-65% -65%	1130.60 1130.60	5552637.00 94790.00	MMTC Rate MMTC Rate
	Total		**4995.070**			**5647427.00**	
15	S.S. Exports	April-06	1712.000	-65%	1080.60	1849987.00	MMTC Rate
	Total		**1712.000**			**1849987.00**	
16	Kabini Minerals	April-06	310.520	-65%	1080.60	335548.00	MMTC Rate
	Total		**310.520**			**335548.00**	
17	MMTC-Bannihatti	June-06 July-06	14539.480	-65%	1302.00	18078534.00	MMTC Rate inclusive of Transport
	Total		**14539.480**			**18078534.00**	
II Jambunathanahalli Iron Ore Mine (JIOM-ML No. 1659) **(a) Calibrated Ore under RCS Contract**							
	Kalyani Steels Ltd.	Apr-06	3004.00	-65%	253.00	759902.00	Selling price fixed as per

							RCS agreement for the period from 3-5-2003 to 2-5-2006
(b) Fines							
	Orient Goa (P) Ltd.,	Apr-06	5296.00	+66%	1468.00	77741320.00	MMTC Rate
	Total		**8300.000**			**8534034.00**	
III Ubbalagundi Iron Ore Mine (UIOM-ML No. 995)							
(a) Lump ore under RCS Contract – Selling Price – Lumps – Rs. 231/-							
	Shivashankar Granite P. Ltd	Nov-06 Dec-06 Jan-07	120.000 2874.000 3303.000	-65% -65% -65%	231.00 231.00 231.00	22787.00 663924.00 762993.00	Price fixed as per RCS agreement valid for two

							years prices will be revised thereafter. Fines however are being supplied at MMTC rates
	Total		**6297.00**			**1449704.00**	
(b) Fines							
	Shivashankar Granite P. Ltd.,	Sept-06	2627.00	-65%	1055.00	2454590.00	MMTC Rate
		Oct-06	4361.000	-65%	1055.00	4601281.00	MMTC Rate
		Nov-06	5578.000	-65%	1055.00	5912793.00	MMTC Rate
		Jan-07	3417.000	-65%	1110.00	3792870.00	MMTC Rate
	Total		**15983.000**			**16761534.00**	

IV. Thimmappagudi Iron Ore Mines – TIOM ML No. 2002 – Joint Venture with M/s JSWL M/s Vijayanagar Minerals Pvt. Ltd.							
18	M/s VMPL	April-06	89304.018	Fines	10	893040.00	Premium is fixed by M/s VMPL the Joint Venture Company. Efforts are being made to revise the premium rates on ad-valorem @ 6% and 10% for fines and calibrated ore
			20316.476	C-Ore	61	1239305.00	
		May-06	89245.227	Fines	10	892452.00	
			15966.140	C-Ore	61	973935.00	
		June-06	67812.383	Fines	10	678124.00	
			12258.708	C-Ore	61	747781.00	
		July-06	92855.346	Fines	10	928553.00	
			16841.640	C-Ore	61	1027340.00	
		Aug-06	94065.780	Fines	10	940658.00	
			15084.470	C-Ore	61	920153.00	
		Sep-06	92048.030	Fines	10	920480.00	
			12310.670	C-Ore	61	750951.00	
		Oct-06	90348.030	Fines	10	903480.00	
			13420.990	C-Ore	61	818668.00	

		Nov-06	95724.420	Fines	10	957244.00	respectively, as against the fixed premium being paid so far.
			8001.390	C-Ore	61	488085.00	
		Dec-06	95390.769	Fines	10	953908.00	
			19364.381	C-Ore	61	1181227.00	
		Jan-07	66794.180	Fines	10	667942.00	
			6824.670	C-Ore	61	416305.00	
	Total		**1013977.718**			**17299631.00**	

Annexure-3 (L.A.Q.No. 1257)

Raising cum Sale Contract & Joint Venture

Sl. No.	Mines	Marketing Agency	Selling price PMT in Rs.	Period	Remarks
1	Subbarayanahalli Iron Ore Mines (SIOM)	M/s Kalyani Steels Limited (KSL)	314/-	1-4-2005 to 31-3-2006	The validity period of selling price of Rs. 314/- PMT was fixed for two year i.e. from 1-4-2005 to 31-3-2007, instead of one year as

					envisaged in the RCS agreement. The discrepancy in this regard was made known to kalyani Steels Limited. This is contested by M/s KSL and they are insisting the validity period of selling price of Rs.314/- up to 31-3-2007. Based on the legal opinion given by the Company Legal Advisor, action is being taken for withdrawal of the earlier letter of fixing the selling price for a period of two years.

2	Jambunathana halli Iron Ore Mines (JIOM)	M/s Kalyani Steels Limited (KSL)	250/-	3-5-2003 to 2-5-2006	The agreement was initially for a period of three years (3-5-2003 to 2-5-2006) and extendable for another five years. Since, the selling price fixed was much less than the prevailing market price for calibrated ore, company decided not to extend the RCS contract for the further period. This was contested by M/s KSL, the marketing agency. The matter is before the Arbitrator. Because of the dispute, the mine is not in operation since 2-5-2006.

3	Ubbalagundi Iron Ore Mines (UIOM)	M/s Shiva shankar Granites Limited (SGL)	231	1-4-2005 to 31-3-2007	The RCS agreement is initially for a period of five years and extendable for another three years. The selling price of at Rs. 231 PMT is firm for a period of two years. The development of mine was commenced on 1-4-2005, based on the working permission granted by MOEF, GoI. On the orders of the Hon'ble Supreme Court, banning mining operation on "working permission"

					operation of mine was suspended during September 2005. The mine was in operation for a period of seven months. After getting final clearance from MOEF, GOI, development of mine was restored. The selling price at Rs. 231/- was retained for the balance period of seventeen months.
4	Thimmappanagudi Iron Ore mines (TIOM)	M/s Vijaya nagar Minerals Pvt. Ltd., (VMPL)	Premium-6% Fines-10% C.Ore (MMTC Price)	From 2000 – 2001	As per the MOU between MML and M/s JSW, the joint venture company M/s VMPL to pay premium at 6% and 10% of the

					prevailing MMTC price. However, the JV company is paying Rs.10/- and Rs. 61/- PMT respectively for fines and Cal.ore. MML has sent notices to M/s. VMPL & JSW asking them to pay, besides revised premium as per the MOU. realization from sale of cal.ore at MMTC price, net present value (NPV), compensation towards Voluntary Retirement Scheme (VRS) M/s JSW has responded to the notice and paid

					Rs.484.16 lakhs towards VRS & NPV sofar. Negotition Committee has been constituted to resolve the other issues. Committee has also been constituted under the Chairmanship of Commissioner, Dept. of Mines & Geology for finalization of share Holders Agreement.

Sale Agreement

In view of unprecedented and abrupt increase in iron ore prices, MML has convinced the sale agreement holder M/s Orient Goa Pvt. Limited, about the justification in upward revision of prices deviation from the agreed terms and conditions had in the agreement dated 4th July 2003, which is valid up to 3rd July

2008. The said agreement was entered, when there is recession in steel sector and demand for iron ore was very limited. By upward revision of prices. w.e.f. 1-1-2004, for the iron ore fines already supplied, MML has realized an additional amount of Rs. 190.00 lakhs.

Further, M/s State Trading Corporation (STC) was the successful bidder through tender process for iron ore fines on 30th June 2005 at Rs. 773/- PMT. 90,000 Tonnes of iron ore fines was supplied accordingly during September 2005 and June, 2006. Now, MML has persuaded STC to purchase at the prevailing MMTC price (around Rs. 1070/- PMT). Accordingly, around 40,000 MTs of iron ore fines were sold to M/s. STC at the prevailing MMTC price. By doing so, the Company has realized on additional amount of Rs. 158.00 lakhs.

Revision of prices of Iron Ore fines & Dumps

Company in its 259th Board Meeting held on 28th July 2006 tool a policy decision of fixint the selling price on par with the MMTC prevailing price (around Rs. 1070/- PMT) and limps at the highest quoted tender rate of Rs. 175/- PMT. This was made applicable to all the buyers from whom MML has received the payment in advance and committed to supply the material at lesser price of around Rs. 100/- to Rs. 675/- PMT in case of fins and for dumps at Rs. 25/- to Rs. 135/- PMT.

Now, except under RCS & Joint Venture agreement, the Company has uniform price structure for selling of iron ore, fines and dumps to the buyers.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. MMTC rate ಒಂದು ಟನ್‌ಗೆ 1075 and 1350 ರೂಪಾಯಿಗಳಿದ್ದಾಗ 314 ಮತ್ತು 283 ರೂಪಾಯಿಯಂತೆ ಒಂದು ಟನ್‌ಗೆ ಕಲ್ಯಾಣಿ ಮತ್ತು ಮುಕುಂದ್ ಸ್ಟೀಲ್ಸ್‌ನವರಿಗೆ ನಾವು ಇವತ್ತಿನವರೆಗೂ ಸರಬರಾಜು ಮಾಡುತ್ತಿದ್ದೇವೆ, ಏಕೆ? ಇವತ್ತಿನದಿವಸ MMTC rate 1100, 1200, 1300 ರೂಪಾಯಿಗಳಷ್ಟಿದೆ. ಆದರೆ, ಅವರಿಗೆ ಮಾತ್ರ ಒಂದು ಟನ್‌ಗೆ 314 ಮತ್ತು 283 ರೂಪಾಯಿಗಳಂತೆ ಇವತ್ತಿಗೂ ಸರಬರಾಜು ಮಾಡುತ್ತಿದ್ದೇವೆ. ಇದು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಬರುತ್ತದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಕಂಪನಿ ಲೆವೆಲ್‌ನಲ್ಲಿ ಏನೇನೋ ಅಗ್ರಿಮೆಂಟ್ ಆಗುತ್ತಿವೆ. ಈ ರೀತಿಯಾಗಿ ಎಲ್ಲಾ ಕಡೆ ಮೋಸವಾಗಿ ಸರ್ಕಾರದ ಸಂಸ್ಥೆಗೆ ಸಾಕಷ್ಟು ಲುಕ್ಸಾನಾಗುತ್ತಿದೆ. ಈ ರೀತಿ ಏತಕ್ಕೆ ಆಗುತ್ತಿದೆ ಮತ್ತೆ ಇದನ್ನು ಬಂದ್ ಮಾಡುವುದಕ್ಕೆ ಏತಕ್ಕೆ ಆಗುತ್ತಿಲ್ಲ. Government of Indiaಗೆ ಸಂಬಂಧಪಟ್ಟಂತಹ State Trading Corporation ನಲ್ಲಿಯೂ ಕೂಡ ಒಪ್ಪಂದ ಮಾಡಿಕೊಂಡಿರತಕ್ಕಂಥದನ್ನು ಕ್ಯಾನ್ಸಲ್ ಮಾಡಿ ಅಲ್ಲಿ ರೇಟ್ ಜಾಸ್ತಿ ಮಾಡಿದ್ದಾರೆ. That is a Government of India Company . It is a Government owned Company, not a private company. Private company ಯವರಿಗೆ ರೇಟ್ ಜಾಸ್ತಿ ಮಾಡುವುದಕ್ಕೋಸ್ಕರ ಬಹಳ ತೊಂದರೆ ಇದೆ. Government company ಗೆ they could persuade them, agreement ಪ್ರಕಾರ ಇದ್ದಂಥ ರೇಟ್ ಅನ್ನು ಕಡಿಮೆ ಮಾಡಿ ಅಂದರೆ, ರೇಟ್ ಅನ್ನು ರಿವೈಸ್ಡ್ ಮಾಡಿ Higher rateಗೆ Government of India Company ಅವರನ್ನು ಒಪ್ಪಿಸಿದ್ದಾರೆ. ಕಲ್ಯಾಣಿ ಮತ್ತು ಇತರೇ ಕಂಪನಿಗಳು ಖಾಸಗಿ ಕಂಪನಿಯಾಗಿರುವುದರಿಂದ ಇವರನ್ನು ಒಪ್ಪಿಸುವುದಕ್ಕೆ MMLನವರಿಗೆ ಏಕೆ ಸಾಧ್ಯವಾಗಿಲ್ಲ ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಕಲ್ಯಾಣಿ ಸಂಸ್ಥೆಗೆ ಹಣವನ್ನು ನಿಗದಿ ಮಾಡಿರತಕ್ಕಂಥದರ ಬಗ್ಗೆ ಮಾನ್ಯ ಸದಸ್ಯರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಮ್ಮ ಸರ್ಕಾರ ಬರುವುದಕ್ಕಿಂಥ ಮುಂಚಿತವಾಗಿಯೇ ಬೆಲೆ ನಿಗದಿಯಾಗಿರತಕ್ಕಂಥ ತೀರ್ಮಾನಗಳು ಇದಾಗಿವೆ. ಆದರೆ, ಇದು ನಮ್ಮ ಗಮನಕ್ಕೆ ಬಂದ ನಂತರ, ಒಂದು ಸಂಸ್ಥೆಗೆ ಸೇರಿದಂಥ ಜಂಬುನಾಥನ

ಹಳ್ಳಿಯ ವ್ಯಾಪ್ತಿಗೆ ಬರತಕ್ಕಂಥ ಒಂದು ಜಾಗದಲ್ಲಿ ನಾವು ಈಗಾಗಲೇ ಕೆಲಸವನ್ನು ನಿಲ್ಲಿಸಿದ್ದೇವೆ. ಆದರೆ, ಅವರು ಕೋರ್ಟ್ ಮುಂದೆ ಹೋಗಿದ್ದಾರೆ. MMTC ಏನೊಂದು ರೇಟ್‌ನ್ನು ನಿಗದಿ ಮಾಡಿದೆಯೋ, ಅದಕ್ಕಿಂಥ ಕಡಿಮೆ ಇದ್ದಂಥವುಗಳ ಮೇಲೆ ಈಗಾಗಲೇ ನಾವು ಕ್ರಮ ತೆಗೆದುಕೊಂಡಿದ್ದು, ನಮ್ಮ ಸರ್ಕಾರ ಬಂದ ನಂತರ ಇವತ್ತಿನ ದಿವಸ MMTC ರೇಟ್ ಪ್ರಕಾರ ಕೊಡಲು ಈಗಾಗಲೇ ಕ್ರಮವನ್ನು ತೆಗೆದುಕೊಂಡಿದೆ. ಆದುದರಿಂದ ನಮ್ಮ ಸರ್ಕಾರ ಬಂದ ನಂತರ MMTC ಬೆಲೆ ಏನು ನಿಗದಿಯಾಗಿದೆಯೋ ಅದಕ್ಕಿಂಥ ಕಡಿಮೆ ದರದಲ್ಲಿ ಕೊಡುವುದಕ್ಕೆ ನಮ್ಮ ಸರ್ಕಾರ ಅವಕಾಶವನ್ನು ಕೊಟ್ಟಿಲ್ಲವೆಂದು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಡಿ.ಆರ್.ಪಾಟೀಲ್: ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮ ಸರ್ಕಾರ ಮತ್ತು ಹಿಂದಿನ ಸರ್ಕಾರವೆಂದು ದಯವಿಟ್ಟು differentiate ಮಾಡಬೇಡಿ. ಈ ವಿಷಯ ಹಿಂದಿನ ಮುಖ್ಯಮಂತ್ರಿಗಳ ಗಮನಕ್ಕೂ ಸಹ ಬಂದಿರುವುದಿಲ್ಲ. ಮತ್ತೆ ಇದು ನಿಮ್ಮ ಗಮನಕ್ಕೂ ಸಹ ಬಂದಿರುವುದಿಲ್ಲ. ಆಫಿಸರ್ಸ್ ಈ ಅಗ್ರಿಮೆಂಟ್ ಮಾಡಿಕೊಳ್ಳುವ ಮುನ್ನಾ ಸರ್ಕಾರದ ಸಂಸ್ಥೆಯ ಹಿತಾಸಕ್ತಿಯನ್ನು ಸೇಫ್‌ಗಾರ್ಡ್ ಮಾಡುವ ಬದಲು ಆ ಖಾಸಗಿ ಸಂಸ್ಥೆಯವರ ಹಿತಾಸಕ್ತಿಯನ್ನು ಸೇಫ್‌ಗಾರ್ಡ್ .ಮಾಡುವ ಹಾಗೆ ಅಗ್ರಿಮೆಂಟ್ ಅನ್ನು ಏಕೆ ಮಾಡಿಕೊಳ್ಳುತ್ತಾರೆ? ಟರ್ಮ್ಸ್ ಆಫ್ ಅಗ್ರಿಮೆಂಟ್ ಗೊತ್ತಾಗುತ್ತದಲ್ಲವೆ. ನಮಗೆ ನಿಮಗೆ ಇಂಗ್ಲಿಷ್ ತಿಳಿಯುತ್ತದೆಯೋ ಅದಕ್ಕಿಂಥ ಚೆನ್ನಾಗಿ ಅವರಿಗೆ ಇಂಗ್ಲಿಷ್ ತಿಳಿಯುತ್ತದೆ. ಆದರೂ ಅವರಿಗೆ ಫೇವರಬಲ್ ಆಗುವಂತೆ ಅಗ್ರಿಮೆಂಟ್ ಏಕೆ ಆಗುತ್ತದೆ ? ಅವರ ಹತ್ತಿರ terms of agreement ಬಗ್ಗೆ ಒಪ್ಪಂದ ಮಾಡಿಕೊಳ್ಳುವ ಪೂರ್ವದಲ್ಲಿ ನಮ್ಮ ಕಂಪನಿಯ ಲಾ ಆಫಿಸರ್ ಆಗಲಿ ಅಥವಾ ಕಾನೂನು ಇಲಾಖೆಯವರ ಕನ್ಸ್‌ಲ್ಟೇಶನ್ ಆಯಿತೋ ಅಥವಾ ಇಲ್ಲವೋ? ನಿಮ್ಮ agreement copy ಅನ್ನು ಎನ್‌ಕ್ಲೋಸ್ ಮಾಡಿ ಎಂದು ಹೇಳಿದ್ದೆ. ಆದರೆ, ಅಗ್ರಿಮೆಂಟ್ ಕಾಪಿಯನ್ನು ಕೊಟ್ಟಿಲ್ಲ. ಆಮೇಲೆ ಅಗ್ರಿಮೆಂಟ್ ಕಾಪಿಯನ್ನು ಕಳುಹಿಸಿ ಕೊಡಿ. ಆದರೆ, ಈ ರೀತಿ ಏಕೆ ಆಗುತ್ತದೆ? ನೀವೇ ಕೊಟ್ಟಿರುವ ಉತ್ತರದಲ್ಲಿ ಏನಿದೆ ಎಂಬುದನ್ನು ನಿಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. M/S. State Trading Corporation was the successful bidder through

tender process for iron ore fines on 30th June 2005 at Rs.773/- PMT. 90,000 Tonnes of iron fines was supplied accordingly during September 2005 and June 2006. Now, MML has persuaded State Trading Corporation to purchase at the prevailing MMTC price (around Rs.1070/- PMT). Accordingly, around 40,000 MTS of iron ore fines were sold to M/S. STC at the prevailing MMTC price. ಸರ್ಕಾರಿ ಸಂಸ್ಥೆಯನ್ನು persuade ಮಾಡಿ, ಹೆಚ್ಚಿನ ರೇಟ್‌ಗೆ ಮಾರಾಟ ಮಾಡುವುದಕ್ಕೆ MML ಗೆ ಬರುತ್ತದೆ. ಖಾಸಗಿ ಸಂಸ್ಥೆಗಳನ್ನು persuade ಮಾಡಿ ರೇಟ್ ಹೆಚ್ಚು ಮಾಡುವುದಕ್ಕೆ ಬರುವುದಿಲ್ಲ. ಇದರ ಅರ್ಥ ಏನು ಎಂಬುದನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು ಇದು ನಿಮಗೂ ಕೂಡ ಏಕೆ ಗೊತ್ತಾಗುವುದಿಲ್ಲ ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೇ, ಖಾಸಗಿ ಸಂಸ್ಥೆಗಳನ್ನು ಒಪ್ಪಿಸಲು ಸರ್ಕಾರ ಏತಕ್ಕಾಗಿ ಕ್ರಮ ತೆಗೆದುಕೊಳ್ಳುತ್ತಿಲ್ಲವೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ. MMTC ಬೆಲೆಗಿಂಥ ಕಡಿಮೆ ಕೊಟ್ಟಿರತಕ್ಕಂಥದರಲ್ಲಿ ಸರ್ಕಾರಿ ಅಧಿಕಾರಿಗಳು ಕೋರ್ಟ್‌ಗೆ ಹೋಗಿ ಅಫಿಡವಿಟ್ ಹಾಕಿರತಕ್ಕಂಥದ್ದು ಇದೆ. ಇದು ಹಿಂದೆ ನಡೆದಿರತಕ್ಕಂಥದ್ದು, ಇದರ ಬಗ್ಗೆ ನಾನು ದೋಷ ಮಾಡುವುದಕ್ಕೆ ಹೋಗುವುದಿಲ್ಲ. ಸದನದಲ್ಲಿ ಈ ಒಂದು ಇಲಾಖೆಗೆ ಸಂಬಂಧಪಟ್ಟಂತೆ ಸುಧೀರ್ಘವಾಗಿ ಚರ್ಚೆಗಳು ನಡೆದಿವೆ. ನನ್ನ ಅಧಿಕಾರವಧಿಯಲ್ಲಿ, ನನ್ನ ಗಮನಕ್ಕೆ ಈ ವಿಷಯ ಬಂದ ಮೇಲೆ ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ. ಹಿಂದೆ ಆಗಿರತಕ್ಕಂಥ ವಿಷಯಗಳನ್ನು ಸರಿಪಡಿಸಲು ನಮ್ಮ ಸರ್ಕಾರ ಈಗಾಗಲೇ ಕ್ರಮವನ್ನು ತೆಗೆದುಕೊಂಡು, MMTC ಬೆಲೆಗಿಂಥ ಕಡಿಮೆ ಕೊಡತಕ್ಕಂಥ ಒಂದು ಸನ್ನಿವೇಶ ಏನಿತ್ತು ಅದನ್ನು ಸಂಪೂರ್ಣವಾಗಿ ನಿಲ್ಲಿಸಿ, ಇವತ್ತು MMTC ಬೆಲೆಗೆ ನಿಗದಿ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಒಂದು ವರ್ಷಕ್ಕೆ ಗುತ್ತಿಗೆಯನ್ನು ನಿಗದಿ ಮಾಡತಕ್ಕಂಥ ಸಂದರ್ಭ ಇದ್ದಾಗ ಹಿಂದೆ ಎರಡು ವರ್ಷಕ್ಕೊಂದು ಏನು ನಿಗದಿ ಮಾಡಿರತಕ್ಕಂಥ ವಿಷಯಗಳ ಬಗ್ಗೆ ನಾವು

ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ. ಇವತ್ತಿನ ದಿವಸ ಸರ್ಕಾರಕ್ಕೆ ಯಾವುದೇ ರೀತಿಯ ನಷ್ಟ ಉಂಟಾಗದಂತೆ ಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ. ಹಿಂದೆ ಆಗಿರುವುದರಲ್ಲಿ ಅಧಿಕಾರಿಗಳು ಏನು ತಪ್ಪು ಮಾಡಿದ್ದಾರೆಯೋ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಈಗಾಗಲೇ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಬಹಳ controversial ವ್ಯಕ್ತಿಯಾಗಿದ್ದಾರೆ. He has taken a lead. ಅವರು ಧೈರ್ಯವಾಗಿ ತೆಗೆದುಕೊಂಡಿರತಕ್ಕಂಥ ನಿಲುವಿಗೆ ನಾವೆಲ್ಲಾ ಅವರನ್ನು ಅಭಿನಂದಿಸುತ್ತೇವೆ. ನಿಷ್ಠುರವಾದಂಥ ನಿಲುವನ್ನು ತೆಗೆದುಕೊಂಡಿರುವ ಕಾರಣಕ್ಕಾಗಿ ನನ್ನ ಮೇಲೆ ಆಪಾಧನೆ ಬಂದಿದೆ ಎಂದು ಅವರು ತಮ್ಮ ನೋವನ್ನು ವ್ಯಕ್ತಪಡಿಸಿದ್ದಾರೆ. ಹೇಗಾದರೂ ಅಂಥ ನಿಷ್ಠುರವಾದಂಥ ನಿಲುವನ್ನು ತೆಗೆದುಕೊಂಡಿದ್ದೀರಿ. ಆದರೆ, ನೀವು ಈಗ ಜಾರಿಕೆ ಉತ್ತರವನ್ನು ಕೊಡುತ್ತಿದ್ದೀರಿ. ನಿಗದಿತವಾದಂಥ ಉತ್ತರವನ್ನು ನೀವು ಕೊಡಲಿಲ್ಲ. ಸ್ಪೆಸಿಫಿಕ್ ಆದಂಥ ಪ್ರಶ್ನೆ ಇಲ್ಲಿದೆ. ಅದೇನೆಂದರೆ, MMTC ರವರು ವಿವಿಧವಾದಂಥ qualities ಗೆ ಏನು ರೇಟ್ ಫಿಕ್ಸ್ ಮಾಡಿದ್ದಾರೆ. ಮತ್ತೆ MML ರವರು ಯಾವ ರೇಟ್‌ಗೆ ಮಾರಾಟ ಮಾಡಿದ್ದಾರೆ? ಅವರು ಕಡಿಮೆ ಅಥವಾ ಜಾಸ್ತಿ ರೇಟ್‌ಗೆ ಮಾರಾಟ ಮಾಡಿದ್ದಾರೆಯೇ? ಕಡಿಮೆ ದರದಲ್ಲಿ ಮಾರಾಟ ಮಾಡಿದರೆ ದ್ರೋಹವಾಗುತ್ತದೆ. ತಾವು ಹಿಂದಿನ ಸರ್ಕಾರದ ಬಗ್ಗೆ ಹೇಳುತ್ತಿದ್ದೀರಿ. ಆದರೆ, ಸರ್ಕಾರ ಎನ್ನತಕ್ಕಂಥದ್ದು ನಿರಂತರ, ಅವತ್ತು ಯಾರಿದ್ದರು ಅಥವಾ ಇವತ್ತು ಯಾರಿದ್ದಾರೆ ಮತ್ತು ಮುಂದೆ ಯಾರು ಬರುತ್ತಾರೆ ಎನ್ನತಕ್ಕಂಥದ್ದು ನಮಗೆ ಗೊತ್ತಿಲ್ಲ. ನಾವು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ಕೇಳುತ್ತಿದ್ದೇವಷ್ಟೆ. ಸರ್ಕಾರದ ಖಜಾನೆಗೆ ಬರಬೇಕಾಗಿರತಕ್ಕಂಥ ಹಣ ಉದ್ದೇಶ ಪೂರ್ವಕವಾಗಿ ಕಡಿಮೆಯಾದರೆ ಸಂಬಂಧಪಟ್ಟವರ ಮೇಲೆ ಕ್ರಮ ಜರುಗಿಸಿದ್ದೇವೆಂದರೆ ತಾವು ಯಾರನ್ನಾದರೂ ಜೈಲಿಗೆ ಕಳುಹಿಸಿದ್ದೀರಾ? Dismiss ಮಾಡಿರುತ್ತೀರಾ? Criminal case ಹಾಕಿರುತ್ತೀರಾ? ಎಷ್ಟು ಜನರ ಮೇಲೆ ಹಾಕಿರುತ್ತೀರಿ? ಯಾವ ಆಫೀಸರ್ಸ್ ಮೇಲೆ, ನೀವು ಕೇಸ್ ಹಾಕದಿದ್ದರೆ ನೀವು ಹೇಳತಕ್ಕಂಥ ಮಾತಿನಲ್ಲಿ ನಿಮಗೆ ನಂಬಿಕೆ ಇಲ್ಲ. ಸುಮ್ಮನೆ ಪ್ರಚಾರಕ್ಕಾಗಿ ಹೇಳುತ್ತಿದ್ದೀರಿ.

ಇಲ್ಲದಿದ್ದರೆ 8 ರಿಂದ 10 ದಿವಸದೊಳಗಾಗಿ ಇವರು ಯಾರ್ಯಾರಿದ್ದಾರೆ, ಹಿಂದೆ ಮತ್ತು ಮುಂದೆ, ನಮಗೆ ಅವತ್ತು ಮತ್ತು ಇವತ್ತು ಯಾರೂ ಬೇಕಾದವರು ಇಲ್ಲ. ಅವರೆಲ್ಲರ ಮೇಲೆ criminal case ನ್ನು ಹಾಕಿಸಿ immediate ಆಗಿ arrest ಮಾಡಿಸುತ್ತೇವೆ, judicial custody ಗೆ ಕಳುಹಿಸುತ್ತೇವೆ ಎಂದು ನೀವು ಹೇಳಬೇಕು. ಅದರ ಮೇಲೆ ಅವರು ಬೇಲ್ ತೆಗೆದುಕೊಳ್ಳುವುದು ಇನ್ನೊಂದು ಮಾಡುವುದು ಅವರ ಹಣೇಬರಹ. ನೀವು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಏಕೆಂದರೆ, you have taken a stand. The whole Country is watching you. ನಿಮ್ಮ ಮೇಲೆ ಜವಾಬ್ದಾರಿ ಇದೆ. ನೀವು ಕ್ರಮ ಜರುಗಿಸುತ್ತೇವೆ, ನೋಡುತ್ತೇವೆ, ವಿಚಾರಿಸುತ್ತೇವೆಂದು ಹೇಳಿದರೆ ಸಮಾಧಾನವಾಗುವುದಿಲ್ಲ. ನಿಮ್ಮ ಅಭಿಮಾನಿಯಾಗಿ ನಿಮಗೆ ಹೆಚ್ಚು ಗೌರವ ಬರಬೇಕೆಂದು ಹೇಳಿ ಈ ಸಜೆಷನ್ ಕೊಡುತ್ತಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅಧ್ಯಕ್ಷರೇ, MMTC ಯ Chief General Manager ಅವರನ್ನು suspention ನಲ್ಲಿಟ್ಟಿದ್ದೇವೆ. ನಮ್ಮ ಮಾನ್ಯ ಡಿ.ಆರ್.ಪಾಟೀಲ್‌ರು ಕೇಳಿರತಕ್ಕಂಥ ಅವರ ಪ್ರಶ್ನೆಗೆ ಉತ್ತರವನ್ನು ಒದಗಿಸಿ ಕೊಟ್ಟಿದ್ದೇನೆ. ಈಗ ಕಾನೂನಿನ ಚೌಕಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದೆ ಬೀಳತಕ್ಕಂಥ ಪ್ರಶ್ನೆ ಇಲ್ಲ. ಇದರಲ್ಲಿ ಯಾರನ್ನು safeguard ಮಾಡತಕ್ಕಂಥ ಪ್ರಶ್ನೆ ಇಲ್ಲ, ಈ ಬಗ್ಗೆ ಸರ್ಕಾರ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಡಿ.ಆರ್.ಪಾಟೀಲ್: ತಾವು ಉತ್ತರವನ್ನು ಕೊಟ್ಟಿರುತ್ತೀರಿ. The validity period of selling price of Rs. 314 per M.T. was fixed for two years i.e. from 01.04.2005 to 31.03.2007, instead of one year as envisaged in the RCS agreement. ನಿಮ್ಮ agreement ಪ್ರತಿವರ್ಷ ರಿವೈಸ್ ಮಾಡಬೇಕೆಂದು ಇದೆ. ಆದರೂ ಎರಡು ವರ್ಷಕ್ಕೆ ಫಿಕ್ಸ್ ಮಾಡಿದ್ದಾರೆ, ಇವತ್ತಿಗೂ 314 ರೂ.ಗಳಂತೆ ಸಪ್ಲೈ ಮಾಡುತ್ತಿದ್ದಾರೆ. ಅದನ್ನು immediate ನಿಲ್ಲಿಸುವುದಕ್ಕೆ ಏನು ತೊಂದರೆ. ಇವು terms of agreement, ನಿಮಗೆ ನಮಗೆ ತಿಳಿಯಲಾರದಂತೆ ಈ ಎಲ್ಲಾ ವ್ಯವಸ್ಥೆ ನಡೆದಿರುತ್ತದೆ. ಸರ್ಕಾರಿ ಕಂಪನಿಗೆ ನಾವು ಹೆಚ್ಚು ಮಾಡುತ್ತೇವೆ. ಖಾಸಗೀ ಕಂಪನಿಗೆ ಹೆಚ್ಚುಮಾಡುವುದಕ್ಕೆ we plead our inability. ಏಕೆ?

ಅದಕ್ಕೆ ನಾನು ಈ RCS agreement copy ಬೇಕು ಎಂದು ಕೇಳಿದ್ದು. Agreement ನಲ್ಲಿ ಪ್ರತಿವರ್ಷ ರಿವೈಸ್ ಮಾಡಬೇಕೆಂದು ಇದೆ. ಎರಡನೇ ವರ್ಷಕ್ಕೆ continue ಮಾಡಿದ್ದೀರಿ. ನೀವೇ ಏಕೆ ಸಪ್ಲೈ ಬಂದು ಮಾಡುವುದಿಲ್ಲ. ಬೇಕಾದರೆ ಅವರು ಕೋರ್ಟಿಗೆ ಹೋಗಲಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕರೇ, 1-4-2005 ರಂದು ಎರಡು ವರ್ಷಕ್ಕೆ ಏನು ಕಂಟ್ರಾಕ್ಟ್‌ನ್ನು ಕೊಟ್ಟಿದ್ದಾರೆ. ಪ್ರತಿ ವರ್ಷಕ್ಕೆ ಕಂಟ್ರಾಕ್ಟ್‌ನ್ನು ಏನು ರಿವೈಸ್ ಮಾಡುವುದು ಇದೆ, ಆ ಸಂದರ್ಭದಲ್ಲಿ ಅದನ್ನು ಎರಡು ವರ್ಷಕ್ಕೆ ಎಂದು ಏನು ತೀರ್ಮಾನವಾಗಿದೆ, ಈಗಾಗಲೇ ಅವರಿಗೆ ವಿಥಡ್ರಾ ಲೇಟರ್‌ನ್ನು ನಾವು ಕಳುಹಿಸಿರುತ್ತೇವೆ. ಮತ್ತು ಅದರ ಮೇಲೆ ಕ್ರಮವನ್ನು ತೆಗೆದುಕೊಂಡಿರುತ್ತೇವೆ. ಅದನ್ನು cancel ಮಾಡುತ್ತೇವೆ ಎನ್ನುವುದನ್ನು ಅವರಿಗೆ ನಾನು ತಿಳಿಸಲಿಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಮುಂದಿನ ಪ್ರಶ್ನೆಗೆ ಹೊಗೋಣ.

ಶ್ರೀ ಡಿ.ಆರ್.ಪಾಟೀಲ್: ಇಲ್ಲದಿದ್ದರೆ ನೀವು ಇದರ ಮೇಲೆ ಅರ್ಧಗಂಟೆ ಕಾಲಾವಕಾಶಕ್ಕೆ ಅನುಮತಿಯನ್ನು ಕೊಡಬೇಕು.

ಅಧ್ಯಕ್ಷರು: ಏನಾಗಿದೆ ಎಂದರೆ, ಎಲ್ಲ ಪ್ರಶ್ನೆಗೂ ಅರ್ಧಗಂಟೆ ಚರ್ಚೆಗೆ ಕೇಳಿದರೆ, ಕೆಲವೆಲ್ಲಾ ಕೊಟ್ಟಿದ್ದೇವೆ ಅವೆಲ್ಲಾ ರೀಚ್ ಆಗುತ್ತಿಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಇದು ಇಡೀ ರಾಜ್ಯದ ಗಮನವನ್ನು ಸೆಳೆಯುವಂಥ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದ ನಿಗದಿತವಾದ ಉತ್ತರವನ್ನು ಹೇಳಲಿಲ್ಲ. ಆಕಾಶದಷ್ಟು ಜವಾಬ್ದಾರಿ ಅವರ ಮೇಲೆ ಇತ್ತು. ಅವರು ಮಾಡಿದ ಹೇಳಿಕೆಗಳಿಗೆ ಅವರು ಮಾಡಿದಂಥ declarations ಗೆ ಕೇಳಿರುವ ಪ್ರಶ್ನೆಗೆ ಇವತ್ತು ಅವರು ಕೊಟ್ಟಂಥ ಉತ್ತರಕ್ಕೆ ನಾವು ಸಾರ್ವಜನಿಕರ ವಿವೇಚನೆಗೆ ಬಿಡುತ್ತೇವೆ. ಯಾರ್ಯಾರು ಎಷ್ಟಕ್ಕೆ ಬದ್ಧರಾಗಿದ್ದಾರೆಂದು ಹೇಳಿ It is unfortunate. ನಮಗೆ ನೋವಾಗುತ್ತದೆ. ಏಕೆ ಅವರು ಮೆತ್ತಗಾಗಿದ್ದಾರೂ ನಮಗೆ ಗೊತ್ತಾಗುತ್ತಿಲ್ಲ. ನಾನು ಅಂದುಕೊಂಡೆ, ನಾವು ಅವರನ್ನು ಈ ಪ್ರಶ್ನೆಯನ್ನು ಕೇಳುವುದರ ಮುಖಾಂತರ ಅವರು ಉಗ್ರಾವತಾರದಲ್ಲಿ ಇವತ್ತು ಈಚೆಗೆ ಬರುತ್ತಾರೆ, ಏನೋ ಒಂದು ಒಳ್ಳೆಯದಾಗುತ್ತದೆಂದು ನಾವು ನಿರೀಕ್ಷೆಯನ್ನು ಮಾಡಿದ್ದೆವು, ಆದರೆ ಮೆತ್ತಗಾಗಿ ಬಿಟ್ಟಿದ್ದಾರೆ. ಅದು ಇವರನ್ನು ಮೆತ್ತಗೆ ಮಾಡಿದಂತೆ ಕಾಣುತ್ತದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಅಧ್ಯಕ್ಷರೆ, ಇದರಲ್ಲಿ ಮೆತ್ತಗಾಗುವಂಥ ಪ್ರಶ್ನೆ ಏನು ಇಲ್ಲ. ಈ ದೇಶದ ಕಾನೂನು ವ್ಯವಸ್ಥೆಯೊಳಗೆ 50 ವರ್ಷದಲ್ಲಿ ಯಾರಿಗೆ ಏನು ಶಿಕ್ಷೆಯನ್ನು ಕೊಟ್ಟಿದ್ದೀರಿ, ಇಂತಹ ಕೆಲಸವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಯಾವ ಸರ್ಕಾರಗಳು ಏನು ಮಾಡಲಿಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಹಿಂದೆ ಇರುವ ಸರ್ಕಾರಗಳು ಮಾಡಲಿಲ್ಲವೆಂದು ಹೇಳಿ, ಮೊದಲನೇ ಭಾರಿಗೆ ನೀವು ಅಧಿಕಾರಕ್ಕೆ ಬಂದವರು, ನಿಮಗೆ ಏಕೆ ಅಧಿಕಾರವನ್ನು ಕೊಟ್ಟಿದ್ದು ಎಂದರೆ, ಅವರೆಲ್ಲಾ ಅವಿವೇಕಿಗಳು ಮಾಡುವುದಕ್ಕಾಗಲಿಲ್ಲ. ನೀವಾದರೆ ಹೊಸ ಪ್ರಯೋಗವನ್ನು ಮಾಡುತ್ತೀರಿ, ಕ್ಷಿಪ್ರ ಕ್ರಾಂತಿಯನ್ನೆ ಮಾಡಿ ಬಿಡುತ್ತೀರಿ, ಎಲ್ಲವನ್ನು ರಾತ್ರೋ ರಾತ್ರಿ ಸುಧಾರಿಸುತ್ತೀರಿ ಎಂದು ಹೇಳಿ ವಿಶ್ವಾಸವನ್ನು ಇಟ್ಟು ನಿಮಗೆ ಜವಾಬ್ದಾರಿಯನ್ನು ಕೊಟ್ಟಿರುವುದು. ನೀವು ಅವರಂತೆ ಮಾಡುವುದಾದರೆ ಏನು ಪ್ರಯೋಜನ, ವ್ಯತ್ಯಾಸವೇನಾಯಿತು. ದಯಮಾಡಿ ಹೇಳಿ, ನಮಗೆ ನಿರಾಶೆಯಾಯಿತು ಅಲ್ಲವೆ? ನಿಮ್ಮ ಮೇಲೆ ನಾವು ಎಷ್ಟು ಆಶೆಯನ್ನು ಇಟ್ಟುಕೊಂಡಿದ್ದೆವು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಅಧ್ಯಕ್ಷರೆ, ನಾನು ರಾಜಿಗೆ ಒಳಗಾಗತಕ್ಕಂಥ ಪ್ರಶ್ನೆ ಏನು ಇಲ್ಲ. ಈಗಾಗಲೇ ನಮ್ಮ ಅಧಿಕಾರಿಗಳು ಈ ವಿಷಯದಲ್ಲಿ ಗಂಭೀರವಾದ ಕ್ರಮವನ್ನು ತೆಗೆದುಕೊಂಡಿದ್ದಾರೆ. ಈಗಾಗಲೇ ಅವರಿಗೆ ಕ್ಯಾನ್ಸಲೇಶನ್ ಲೇಟರನ್ನು ಕೂಡ ಕೊಟ್ಟಿದ್ದಾರೆ. legal action ಗಳು ಏನು ತೆಗೆದುಕೊಳ್ಳಬೇಕು, ಅದನ್ನು ತೆಗೆದುಕೊಳ್ಳುತ್ತಿದ್ದಾರೆ. ಹಿಂದೆ ಮಾಡಿರತಕ್ಕಂಥ ಅಗ್ರಿಮೆಂಟ್‌ಗಳು ಏನಿವೆ, ಆ ಅಗ್ರಿಮೆಂಟ್‌ಗಳನ್ನು ರಾತ್ರೋರಾತ್ರಿ ಕ್ಯಾನ್ಸಲ್ ಮಾಡತಕ್ಕಂಥದ್ದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಅವಕಾಶವಿಲ್ಲ. ಅದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಆ ವಿಷಯದಲ್ಲಿ ನಾವು ಯಾವುದೇ ಕಾರಣಕ್ಕೂ ರಾಜಿಯಾಗತಕ್ಕಂಥ ಪ್ರಶ್ನೆ ಇಲ್ಲ, ಸರ್ಕಾರಕ್ಕೆ ಆದಾಯ ಬರತಕ್ಕಂಥದ್ದರಲ್ಲಿ ನಷ್ಟವಾಗುವುದಕ್ಕೆ ನನ್ನ ಅಧಿಕಾರದ ಅವಧಿಯಲ್ಲಿ ಅದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಇದರ ಬಗ್ಗೆ ಮಾನ್ಯ ರಮೇಶ್‌ಕುಮಾರ್‌ರವರಿಗೆ ಗೊತ್ತಿರತಕ್ಕಂಥ ವಿಚಾರ. ಇವತ್ತಿನ ಕಾನೂನಿನ ವ್ಯವಸ್ಥೆಗಳು ಯಾವ್ಯಾವ ರೀತಿಯಲ್ಲಿ ರಕ್ಷಣೆ ಕೊಡುತ್ತಿವೆ ಎಂದು ಅವರಿಗೂ ಗೊತ್ತಿದೆ.

ಶ್ರೀ ಕೆ.ಆರ್.ರಮೇಶಕುಮಾರ್: ಅಧ್ಯಕ್ಷರೆ, ಅತ್ಯಂತ ನಮ್ರತೆಯಿಂದ ಕೈಜೋಡಿಸಿ ತಮ್ಮಲ್ಲಿ ಮಾನ್ಯ ಅಧ್ಯಕ್ಷರ ಮೂಲಕ ನಾನು ಕೇಳಿಕೊಳ್ಳುತ್ತೇನೆ. ಕಳ್ಳರನ್ನು ನೀವು ಈ ಕೇಸ್‌ನಲ್ಲಿ ಹುಡುಕಬೇಕಾಗಿಲ್ಲ. MMTC rate ಗಿಂತ ಕಡಿಮೆ rate ಗೆ ಮಾರಾಟವನ್ನು ಮಾಡಿದ್ದರೆ ಅದು 100% prima facie ಮೇಲ್ನೋಟಕ್ಕೆ ಖಚಿತವಾಗಿ ಈ ರಾಜ್ಯಕ್ಕೆ ಮಾಡಿದಂಥ ದ್ರೋಹ, ಅವನು ನಿಮ್ಮ ಎದುರಿಗೆ ಬೋರ್ಡ್ ಹಾಕಿಕೊಂಡು ನಿಂತಿದ್ದಾನೆ. ನಾನು ಕಳ್ಳ ಕದ್ದವನು ಎಂದು, ಅವನ ಮೇಲೆ ಕ್ರಮ ಜರುಗಿಸುವುದಕ್ಕೆ, ಕಾನೂನು ವ್ಯವಸ್ಥೆ ಎಂದು ಹೇಳಿ ಒಂದು ವರ್ಷದಿಂದ "ನೋಡುತ್ತೇವೆ" "ಮಾಡುತ್ತೇವೆ" ಎಂದು ಹೇಳಿದರೆ, ನೀವು ಬೇರೆ ಕಳ್ಳರನ್ನು ಮತ್ತು ಬಚ್ಚಿಟ್ಟುಕೊಂಡವರನ್ನು ಯಾವಾಗ ಹಿಡಿದು ಶಿಕ್ಷೆ ಕೊಡುವುದು? ನಿಮ್ಮ ಎದುರಿಗೆ ಅವನು ನಾನೇ ಕಳ್ಳ ಎಂದು ಬೋರ್ಡ್ ಹಾಕಿಕೊಂಡು ಏನು ಮಾಡುತ್ತೀರಿ ಎಂದು ನಿಂತಿದ್ದಾನೆ. ಅವನನ್ನು ಹಿಡಿದುಕೊಳ್ಳುವುದಕ್ಕೆ ನೀವು ತಯಾರಿಲ್ಲ.

ಅಧ್ಯಕ್ಷರು: Let us go to the next question.

ಶ್ರೀ ಎಂ.ಪಿ.ಪ್ರಕಾಶ್: ಅಧ್ಯಕ್ಷರೆ, ಕಾನೂನಿನ ಪ್ರಕಾರವೇ ಕ್ರಮ ಕೈಗೊಳ್ಳಬೇಕು. ನಾನೇ ಕಳ್ಳ ಎಂದು ಅವನು ಹೇಳಿದರೂ ಕೂಡ ಕಾನೂನಿನ ಪ್ರಕಾರವೇ ಕ್ರಮ ಕೈಗೊಳ್ಳಬೇಕು, ಅದೇ ದುರ್ಧೈವ, ಹಾಗೆ ನಮ್ಮ law ಹೇಳುತ್ತದೆ. ಅವನನ್ನು ಹಿಡಿಯಬಹುದು ಅಷ್ಟೆ. ಬೇರೆ ಏನು ಇಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ನಿಷ್ಪಾವಂತ ಅಧಿಕಾರಿಗಳು ಆ ಕಳ್ಳರನ್ನು ಹಿಡಿಯಲಿಕ್ಕೆ ಹೋಗಿ Court ಮುಂದೆ contempt ನ್ನು ಇವತ್ತು ಎದುರಿಸುತ್ತಿದ್ದಾರೆಂದು ಈ ಸದನಕ್ಕೆ ಹೇಳಲು ಬಯಸುತ್ತೇನೆ.

ಶ್ರೀ ಕೆ.ಆರ್.ರಮೇಶಕುಮಾರ್: ಆದರೂ ಕೂಡ ಅದರಿಂದ ಸದನಕ್ಕೆ ಬೆನೆಫಿಟ್ ಆಗುತ್ತದೆ. ಮಾನ್ಯ ಪ್ರಕಾಶ್‌ರವರ ಗಮನಕ್ಕೆ ಕೃಷ್ಣಯ್ಯನವರ ಒಂದು Off the Bench ಒಂದು ಕಡೆ ಅವರು ಹೀಗೆ ಹೇಳುತ್ತಾರೆ. It is by the goodness of God that in our Country we have those three unspeakably precious things. Freedom of speech, freedom of conscience and the prudence never to practice either of them.

ಶ್ರೀ ಎಂ.ಪಿ.ಪ್ರಕಾಶ್: ಪಾಪ ಕೃಷ್ಣಯ್ಯನವರ ಪರಿಸ್ಥಿತಿ ಏನಾಯಿತು ಎಂದು ತಮಗೆ ಗೊತ್ತಿದೆ. He was superseded. Not only he but our K.S.Hegde was superseded. All the three of them. ಪಾಪ ಯಾರು candid ಆಗಿ ಮಾತನಾಡುತ್ತಾರೆ, ಅವರಿಗೆ ನ್ಯಾಯ ಸಿಗುವುದಿಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ನೀವು ಅರ್ಥವನ್ನು ಮಾಡಿಕೊಳ್ಳಲಿಲ್ಲ. ...unspeakably precious things. Freedom of speech, freedom of conscience and the prudence never to practice either of them. It is more applicable to people like you.

ಶ್ರೀ ಡಿ.ಆರ್.ಪಾಟೀಲ್: Half an hour discussionಗೆ allow ಮಾಡಿ. ನಾನು ಅಗ್ರಿಮೆಂಟ್ ಕಾಪಿಯನ್ನು ಕೇಳಿದ್ದೇನೆ.

ಅಧ್ಯಕ್ಷರು: ಏನಾಗಿದೆ ಎಂದರೆ, ಎರಡು ಮೂರಕ್ಕೆ ನಾನು ಅಲೋ ಮಾಡಿದ್ದೇನೆ, ಯಾವುದು ರೀಚ್ ಆಗುತ್ತಿಲ್ಲ.

ಶ್ರೀ ಡಿ.ಆರ್.ಪಾಟೀಲ್: ನಮಗೆ ಅಗ್ರಿಮೆಂಟ್ ಕಾಪಿಯನ್ನು ಕೊಟ್ಟಿಲ್ಲ.

ಅಧ್ಯಕ್ಷರು: Half an hour discussionಗೆ. ಇದನ್ನು ತೆಗೆದು ಕೊಳ್ಳುತ್ತೇನೆ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಮುಖ್ಯಮಂತ್ರಿಗಳಿಗೆ, ನನ್ನ ಒಂದು ಸೂಚನೆ, ಈಗ ಜಿಂದಾಲ್ ಕಂಪನಿಯನ್ನು ಕೂಡ ಜಾಯಿಂಟ್ ವೆಂಚರ್ ಮಾಡಿಕೊಂಡಿದ್ದೇವೆ.

ಶ್ರೀ ಹೆಚ್.ಡಿ.ರೇವಣ್ಣ: ಒಂದೊಂದು ತಾಸು ಪ್ರಶ್ನೋತ್ತರಕ್ಕೆ ಕೊಟ್ಟರೆ ಹೇಗೆ ಆಗುತ್ತದೆ ಸ್ವಾಮಿ. ಮಾನ್ಯ ಸಭಾಧ್ಯಕ್ಷರು ಇದರ ಬಗ್ಗೆ ಹೇಳಬೇಕು.

ಶ್ರೀ ಡಿ.ಆರ್.ಪಾಟೀಲ್: ಅಧ್ಯಕ್ಷರೆ, joint venture company ore supply ಮಾಡುವುದು ಜಿಂದಾಲ್ ಸ್ಟೀಲ್ ಕಂಪನಿಗೆ, ಅದರಿಂದ ಈ ಸರ್ಕಾರಕ್ಕೆ ಇನ್ನು ಏನು ಲಾಭ ಬಂದಿಲ್ಲ. ದಯವಿಟ್ಟು ಈ ಜಿಂದಾಲ್‌ದವರ ಆತಿಥ್ಯ ಸ್ವೀಕಾರ ಮಾಡುವುದು ಏನು ಇದೆ ಅಲ್ಲಾ, ಅವರ Air strip ಆಗಲಿ ಅವರ Aircraft ಆಗಲಿ ಈ ಆತಿಥ್ಯ ಸ್ವೀಕಾರವನ್ನು ನಮ್ಮ ಮಂತ್ರಿಮಾನ್ಯರು, ನಮ್ಮ ಅಧಿಕಾರಿಗಳು ಸ್ವೀಕಾರ ಮಾಡದಂತೆ ಒಂದು ವ್ಯವಸ್ಥೆಯನ್ನು ಮಾಡಿದರೆ ಅವರ ಮೇಲೆ ಕಡಿವಾಣ ತರುವುದಕ್ಕೆ ಆಗುತ್ತದೆಂದು ಹೇಳಬಹುದು. ನಿಮಗೆ ಒಂದು ಕಪ್ ಚಹಾ ಕುಡಿಸಿ ಅವರು ನೂರಾರು ಕೋಟಿಗಟ್ಟಲೇ ಲೂಟಿ

ಹೊಡೆಯುತ್ತಾರಲ್ಲಾ ಅದಕ್ಕೆ ಅವಕಾಶವನ್ನು ಮಾಡಿ ಕೊಡಬಾರದು. ದಯವಿಟ್ಟು ಆ ಕ್ರಮವನ್ನು ತಾವು ಕೈಗೊಳ್ಳುತ್ತೀರಾ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಅಧ್ಯಕ್ಷರೆ, ಅವರು ಏನು ಜಿಂದಾಲ್ ಕಂಪನಿಯ ಬಗ್ಗೆ ಹೇಳಿದ್ದಾರೆ. ಸುಮಾರು 180 ಕೋಟಿ ರೂ.ಗಳ ಹಣವನ್ನು ಪರಿಸ್ಕೃತ ದರದಲ್ಲಿ ಅವರಿಗೆ ಕಟ್ಟುವುದಕ್ಕೆ ನಾವು ಏನು ನೋಟೀಸ್ ಕೊಟ್ಟಿದ್ದೇವೆ, ಅದಕ್ಕೆ ಅವರು ಈಗಾಗಲೇ 6 ಕೋಟಿ ರೂ.ಗಳ ಹಣವನ್ನು ಕಟ್ಟಿದ್ದಾರೆ. ನಾವು ಅವರ ಟೀ, ಕಾಫಿಯ ಆತಿಥ್ಯಕ್ಕೆ ಒಳಗಾಗಿ ಸರ್ಕಾರಕ್ಕೆ ಬರತಕ್ಕಂಥ ಹಣವನ್ನು ಸಂಗ್ರಹ ಮಾಡುವುದರಲ್ಲಿ ಇವತ್ತು ಎಡವಿಲ್ಲ.

ಶ್ರೀ ಡಿ.ಆರ್.ಪಾಟೀಲ್: ಅವರ ಆತಿಥ್ಯವನ್ನು ಸ್ವೀಕಾರ ಮಾಡುವುದಿಲ್ಲವೆಂದು ಹೇಳುವುದಕ್ಕೆ ಏನು ತೊಂದರೆ ಇದೆ.

ಅಧ್ಯಕ್ಷರು: ಮಾನ್ಯ ಪಾಟೀಲ್‌ರೆ, ನಿಮ್ಮದು ಬಹಳ ಜಾಸ್ತಿಯಾಯಿತು.

ಪ್ರವಾಸೋದ್ಯಮ ಅಭಿವೃದ್ಧಿಗೆ ಅನುದಾನ ಬಿಡುಗಡೆ

160(1027) ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು) ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಸರ್ಕಾರ ತೆಗೆದಕೊಂಡಿರುವ ಕ್ರಮಗಳೇನು;

ಆ) ಈ ಕಾರ್ಯಕ್ಕಾಗಿ ಸರ್ಕಾರ ಒದಗಿಸಿರುವ ಅನುದಾನವೆಷ್ಟು;

ಇ) ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಸಮೀಕ್ಷೆ ನಡೆಸಲಾಗಿದೆಯೇ;

ಈ) ಚಿಕ್ಕಮಗಳೂರು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ ಜಿಲ್ಲಾಡಳಿತ ಸಲ್ಲಿಸಿರುವ ವರದಿಗೆ ಸರ್ಕಾರದ ಕ್ರಮವೇನು?

ಶ್ರೀ ಬಿ. ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು):

ಅ) ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರುರವರು ದಿನಾಂಕ 27-3-2003 ರಂದು ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಪ್ರವಾಸಿ ಸ್ಥಳಗಳ ಅಭಿವೃದ್ಧಿಗಾಗಿ 1.00 ಕೋಟಿ ರೂ.ಗಳ ಪ್ರಸ್ತಾವನೆಯನ್ನು ಇಲಾಖೆಗೆ ಸಲ್ಲಿಸಿರುತ್ತಾರೆ. ಜಿಲ್ಲಾಧಿಕಾರಿಗಳು, ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಗಣಿಸಿ ಸದರಿ